ಸಂಘಗಳಿಗೆ ನೀಡಲಾಗಿದೆ. ಅಲ್ಲದೆ ಮೈಸೂರಿನ ಕರ್ನಾಟಕ ಸಹಕಾರಿ [illegible]
ಮಂಡಳಿಗೆ ಸಮಗ್ರ ಜಲಾಶಯ ಅಭಿವೃದ್ಧಿ ಕೈಗೊಳ್ಳಲೂ ಸಹ [illegible]

ಈ ಹಣವನ್ನು ಪ್ರಾಥಮಿಕ ಮೀನುಗಾರರ ಸಹಕಾರ ಸಂಘಗಳಾದ ಕಾರವಾರ, ತದಡಿ, ಗಂಗೊಳ್ಳಿ, ಮಲ್ಪೆ, ಬೇಳಿಕೇ, ಕಿರುಮಂಜೇಶ್ವರ,, ಬೆಳಕೂಂಡ. [illegible] ಮೀನುಗಾರರ ಸಹಕಾರ ಸಂಘ, ಮಂಗಳೂರು ಮಂಗಳೂರು ಬೆಂಗ್ರೆ ಪ್ರಾಥಮಿಕ ಸಹಕಾರ ಸಂಘ, ಬಿಡ ವಿರಮಾಳ್, ಅಳಿವ ಕೋಡಿ, ಬಂಗಳೂರು, ಕುಂದಾಪುರ ಭಟ್ಕಳ, ಸಂದಸ್ಗಪ್ಪ. ಕೋಡಿಫಾಗ, ಪಡಿಯಾ [illegible] ಪ್ರಾಥಮಿಕ ಸಹಕಾರ ಸಂಘ ಕೋಟ ದಕ್ಷಿಣ ಕನ್ನಡ ಜಿಲ್ಲಾ ಸಹಕಾರಿ ಮೀನು ಮಾರಾಟ [illegible] ಮಂಡಳಿ ಮತ್ತು ಉತ್ತರ ಕನ್ನಡ ಜಿಲ್ಲೆಯ ಸಹಕಾರಿ ಮೀನು ಮಾರಾಟ ಮಹಾ ಮಂ[illegible] ಕರ್ನಾಟಕ ಸಹಕಾರ ಮಹಾ ಮಂಡಳಿ ಇವುಗಳಲ್ಲಿ ಏರ್ಪಡ ಮಾಡಲಾಗಿದೆ.

ಆಸ್ಟ್ರೇಲಿಯದಿಂದ ಹೋರಿಗಳನ್ನು ಖರೀದಿಸುವುದು.

669 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೆ.ಎಂ.ಎಫ್.ನಿಂದ ಹೈನು ಉದ್ಯಮವನ್ನು ಉನ್ನತೀಕರಿಸಲು ಸರ್ಕಾರ ಆಸ್ಟ್ರೇಲಿಯಾದಿಂದ ಹೋರಿಗಳನ್ನು ಖರೀದಿಸಲಿದೆಯೇ,

ಆ) ಎಷ್ಟು ಹೋರಿಗಳನ್ನು ಎಷ್ಟು ಹಣಕೊಟ್ಟು ಖರೀದಿಸಲಾಗುವುದು, ಈ ಹೋರಿಗಳು ಸ್ಥಳೀಯ ಹವೆಗೆ ಒಗ್ಗುತ್ತವೆಯೇ, ಈಗ ಎಷ್ಟು ಹೋರಿಗಳನ್ನು ತರಿಸಲಾಗಿದೆ,

ಇ) ಸ್ಥಳೀಯ ತಳಿಗಳನ್ನೇ ಅಭಿವೃದ್ಧಿಪಡಿಸಿ ಹೈನು ಉದ್ಯಮವನ್ನು ಉನ್ನತೀಕರಿಸಲು ಕ್ರಮ ಕೈಗೊಳ್ಳಲು ಸಾಧ್ಯವಿಲ್ಲವೇ?

ಶ್ರೀ ಬಿ.ಎಸ್. ಬುಜ್ಜೇಗೌಡ (ಪಶುಸಂಗೋಪನಾ ರಾಜ್ಯ ಸಚಿವರು) :

ಅ) ಈಗಾಗಲೇ ಖರೀದಿಸಲಾಗಿದೆ.

ಆ) 1) 65 ಹೋರಿಗಳನ್ನು ರೂ. 51,53,325.30 ಗಳ ವೆಚ್ಚದಲ್ಲಿ ಖರೀದಿಸಲಾಗಿದೆ.

2) ಈ ಹೋರಿಗಳು ಸ್ಥಳೀಯ ಹವೆಗೆ ಒಗ್ಗುತ್ತವೆ.

ಇ) ಸ್ಥಳೀಯ ತಳಿಗಳ ಉತ್ಪಾದನೆ ಸಾಮರ್ಥ್ಯ ಕಡಿಮೆಯಿರುವುದರಿಂದ ಸಾಧ್ಯವಾಗದು.

ಪಿಲಿಕುಳ ನಿಸರ್ಗ ಧಾಮಗಳನ್ನು ಪ್ರವಾಸೋದ್ಯಮ ಕೇಂದ್ರ ಮಾಡುವ ಕುರಿತು.

670 - ಶ್ರೀ ಯೋಗಿಶ್ ಭಟ್ (ಮಂಗಳೂರು) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?